ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ
ನಿರ್ದೇಶಕರು, ಕೈಮಗ್ಗ ಮತ್ತು ಜವಳಿ
ರವರ ಕಚೇರಿ

ಕರ್ನಾಟಕ ಸರ್ಕಾರ

ನಂ.14/3ಎ,
ರಾಷ್ಟ್ರೋತ್ಥಾನ ಪರಿಷತ್ ಕಟ್ಟಡ
3 ನೇ ಮಹಡಿ, ನೃಪತುಂಗ ರಸ್ತೆ,
ಬೆಂಗಳೂರು – 560 001
ದೂರವಾಣಿ:080–22271628
ಫ್ಯಾಕ್ಸ್ : 080–22226082

ಕೈಜಇ/ಜಂ.ರಿ/37/ಕೈಮಗ್ಗ & ವಿದ್ಯುತ್‌ಮಗ್ಗ/ಪ್ರತ್ಯೇಕ ಅಸ್ತಿತ್ವ/ಸುತ್ತೋಲೆ/2015–16 ದಿ: 05/02/2016.

**ಪೀಠಿಕೆ :**

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಮತ್ತು ನಿಯಮಗಳು 1960ರಡಿ ನೋಂದಣಿಯಾಗುತ್ತಿರುವ, ಕೈಮಗ್ಗ ಮತ್ತು ಜವಳಿ ಇಲಾಖೆಯ ಅಧೀನದಲ್ಲಿ ಬರುವ ಕೆಲವು ನೇಕಾರರ ಸಹಕಾರ ಸಂಘಗಳು, **"ಕೈಮಗ್ಗ ಮತ್ತು ವಿದ್ಯುತ್ ಮಗ್ಗ ನೇಕಾರರ ಸಹಕಾರ ಸಂಘ"** ಎಂಬ ಜಂಟಿ ಶಿರೋನಾಮೆಯೊಂದಿಗೆ ನೋಂದಾಯಿಸಿಕೊಂಡು, ಸರ್ಕಾರದ ವಿವಿಧ ಇಲಾಖೆಗಳ ಯೋಜನೆಯ ಲಾಭ ಪಡೆಯುವುದಕ್ಕೋಸ್ಕರ ಬಳಕೆ ಮಾಡುತ್ತಿರುವುದು ಈ ಕಛೇರಿಯ ಗಮನಕ್ಕೆ ಬಂದಿರುತ್ತದೆ.

ಸರ್ಕಾರದ ಹಾಗೂ ಕೈಮಗ್ಗ ಮತ್ತು ಜವಳಿ ಇಲಾಖೆಯ ಯೋಜನೆಗಳು, ನೈಜ ಮತ್ತು ಎಲ್ಲಾ ವರ್ಗದ ನೇಕಾರರಿಗೆ ದೊಡ್ಡ ಪ್ರಮಾಣದಲ್ಲಿ ತಲುಪುವಂತೆ ಮತ್ತು ಹೆಚ್ಚು ಹೆಚ್ಚಾಗಿ ಲಾಭ ಪಡೆಯುವಂತಾಗಲು ಹಾಗೂ ಆಡಳಿತಾತ್ಮಕ ಉದ್ದೇಶದಿಂದ, **"ಕೈಮಗ್ಗ ನೇಕಾರರ ಸಹಕಾರ ಸಂಘಗಳು"** ಮತ್ತು **"ವಿದ್ಯುತ್ ಮಗ್ಗ ನೇಕಾರರ ಸಹಕಾರ ಸಂಘಗಳು"** ಪ್ರತ್ಯೇಕ ಅಸ್ತಿತ್ವ ಹೊಂದುವುದು ಅವಶ್ಯಕವಾಗಿರುತ್ತದೆ.

ಅಲ್ಲದೇ, ಬಹಳಷ್ಟು ನೇಕಾರರ ಸಹಕಾರ ಸಂಘಗಳು **"ಕೈಮಗ್ಗ ಅಥವಾ ವಿದ್ಯುತ್ ಮಗ್ಗ ನೇಕಾರರ ಸಹಕಾರ ಸಂಘ"** ಎಂಬ ಶಿರೋನಾಮೆಯೊಂದಿಗೆ ***"ಕುರಿ ಉಣ್ಣೆ ಉತ್ಪಾದನಾ ಮತ್ತು ಮಾರಾಟ ನೇಕಾರರ ಸಹಕಾರ ಸಂಘ", "ಕುರಿ ಮತ್ತು ಪಶುಸಂಗೋಪನಾ ಸಹಕಾರ ಸಂಘ", "ಸಿದ್ಧ ಉಡುಪು ಉತ್ಪಾದನೆ ಸಹಕಾರ ಸಂಘ", "ಗ್ರಾಮೀಣ ಅಭಿವೃದ್ಧಿ ನೇಕಾರರ ಮಾರಾಟ ಸಹಕಾರ ಸಂಘ", "ನೇಕಾರರ ಪತ್ತಿನ ಸಹಕಾರ ಸಂಘ" "ವಿವಿದೋದ್ದೇಶ ನೇಕಾರರ ಸಹಕಾರ ಸಂಘ"*** ಇತ್ಯಾದಿಗಳೊಂದಿಗೆ, ಸಹಕಾರ ಸಂಘಗಳನ್ನು ಸಂಘಟಿಸಿಕೊಂಡು, ಬೇರೆ ಬೇರೆ ಇಲಾಖೆಗಳಿಗೆ ಸಂಬಂಧಪಟ್ಟ ಧ್ಯೇಯೋದ್ದೇಶಗಳನ್ನು ಸೇರ್ಪಡೆ ಮಾಡಿಕೊಂಡು, ಇತರೆ ಚಟುವಟಿಕೆಗಳನ್ನು ಸಮ್ಮಿಲನಗೊಳಿಸಿಕೊಂಡು, ಕೆಲವೇ ಸಬಲ ವ್ಯಕ್ತಿಗಳು ಸರ್ಕಾರದ ಯೋಜನೆಗಳನ್ನು ಬಳಸಿಕೊಳ್ಳುವಂತಹ ಸಾಧ್ಯತೆಯು ಗಮನಕ್ಕೆ ಬಂದಿರುತ್ತದೆ. ಈ ಮೇಲಿನ ಪದಗಳೊಂದಿಗೆ ಪ್ರಾರಂಭವಾಗುವ ಸಹಕಾರ ಸಂಘಗಳು, ಕೈಮಗ್ಗ ಮತ್ತು ಜವಳಿ ಇಲಾಖೆಯನ್ನು ಹೊರತುಪಡಿಸಿ ಸಹಕಾರ ಇಲಾಖೆ, ಪಶುಸಂಗೋಪನಾ ಮತ್ತು ರೇಷ್ಮೆ ಇಲಾಖೆ ಹಾಗೂ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಗಳ ವ್ಯಾಪ್ತಿಗಳಿಗೆ ಮತ್ತು ಮಾರ್ಗಸೂಚಿಗಳಿಗೆ ಒಳಪಡುತ್ತವೆ. ಆದ್ದರಿಂದ ಕೈಮಗ್ಗ ಮತ್ತು ಜವಳಿ ಇಲಾಖೆ ಅಧೀನದಲ್ಲಿ ನೊಂದಣಿಯಾಗಿರುವ ಸಹಕಾರ ಸಂಘಗಳು ಈ ಪದಗಳನ್ನು ಕೈ ಬಿಡುವುದು ಕೂಡಾ ಅವಶ್ಯಕವಾಗಿರುತ್ತದೆ.

ಆದ್ದರಿಂದ, ಇದುವರೆವಿಗೂ ನೋಂದಾಯಿಸಿರುವ / ಚಾಲ್ತಿಯಲ್ಲಿರುವ ಈ ಇಲಾಖೆಯ ವ್ಯಾಪ್ತಿಗೊಳಪಡುವ ಹತ್ತಿ, ಉಣ್ಣೆ ಮತ್ತು ರೇಷ್ಮೆಯ ಕೈಮಗ್ಗ ನೇಕಾರರ ಸಹಕಾರ ಸಂಘಗಳು ಅಥವಾ ಹತ್ತಿ, ಉಣ್ಣೆ ಮತ್ತು ರೇಷ್ಮೆಯ ವಿದ್ಯುತ್ ಮಗ್ಗ ನೇಕಾರರ ಸಹಕಾರ ಸಂಘಗಳು ಪ್ರತ್ಯೇಕ ಅಸ್ತಿತ್ವ ಹೊಂದಲು ಹಾಗೂ ಆಡಳಿತ ಹಿತದೃಷ್ಟಿಯಿಂದ ಅನುಕೂಲವಾಗುವಂತೆ ಸಹಕಾರ ಸಂಘಗಳ ಬೈಲಾವನ್ನು ಅವಶ್ಯವಿದ್ದಲ್ಲಿ ಈ ಕೂಡಲೇ ತಿದ್ದುಪಡಿ ಮಾಡಿಕೊಳ್ಳುವುದು ಸೂಕ್ತವಾಗಿರುತ್ತದೆ.

ಈ ಹಿನ್ನೆಲೆಯಲ್ಲಿ, ಮೇಲ್ಕಾಣಿಸಿದ ವಾಸ್ತವಾಂಶಗಳ ಔಚಿತ್ಯತೆಯನ್ನು ಮನಗಂಡು ಈ ಕೆಳಗಿನಂತೆ ನಿರ್ದೇಶನವನ್ನು ನೀಡಿದೆ.

## ಸುತ್ತೋಲೆ

**ಕೈಜಇ/ಜಂ.ರಿ/37/ಕೈಮಗ್ಗ & ವಿದ್ಯುತ್‌ಮಗ್ಗ/ಪ್ರತ್ಯೇಕ ಅಸ್ತಿತ್ವ/ಸುತ್ತೋಲೆ/2015-16 ದಿ: 05/02/2016.**

ಕೈಮಗ್ಗ ಮತ್ತು ಜವಳಿ ಇಲಾಖೆಯ ವ್ಯಾಪ್ತಿಗೊಳಪಡುವ ಹತ್ತಿ, ಉಣ್ಣೆ ಮತ್ತು ರೇಷ್ಮೆ ನೇಕಾರರ ಸಹಕಾರ ಸಂಘಗಳು – **"ಕೈಮಗ್ಗ ಮತ್ತು ವಿದ್ಯುತ್ ಮಗ್ಗ ನೇಕಾರರ ಸಹಕಾರ ಸಂಘಗಳು"** ಎಂಬ ಶಿರೋನಾಮೆಯಡಿ ಕಾರ್ಯ ನಿರ್ವಹಿಸುತ್ತಿದ್ದಲ್ಲಿ, ಕಾರ್ಯವ್ಯಾಪ್ತಿಯ ಕ್ಷೇತ್ರೀಯ ಸಹಕಾರ ಸಂಘಗಳ ನಿಬಂಧಕರು ತಮ್ಮ ವ್ಯಾಪ್ತಿಯಲ್ಲಿ ಬರುವ ಅಂತಹ ನೇಕಾರರ ಸಹಕಾರ ಸಂಘಗಳಿಗೆ ನೋಟೀಸು ನೀಡಿ, ಈ ಮೇಲಿನ ಪೀಠಿಕೆಯಲ್ಲಿ ವಿವರಿಸಿರುವ ಜಂಟಿ ಶೀರ್ಷಿಕೆಗಳನ್ನು ಕೈಬಿಟ್ಟು, ಕೈಮಗ್ಗ ಅಥವಾ ವಿದ್ಯುತ್ ಮಗ್ಗವೆಂದು ಪ್ರತ್ಯೇಕವಾಗಿ ವರ್ಗೀಕರಿಸಿಕೊಂಡು, ಅದಕ್ಕನುಗುಣವಾಗಿ ಸಂಘದ ಸ್ಥಾಪನೆಯ ಉದ್ದೇಶವನ್ನು ಮಾರ್ಪಡಿಸಿ, ಬೈಲಾ ತಿದ್ದುಪಡಿ ಪ್ರಸ್ತಾವನೆಯನ್ನು ಸಂಘದ ಆಡಳಿತ ಮಂಡಳಿಯಲ್ಲಿ ಹಾಗೂ ಸಾಮಾನ್ಯ ಸಭೆಯಲ್ಲಿ ನಿರ್ಧರಿಸಿ, ಈ ಕೂಡಲೇ ಬೈಲಾ ತಿದ್ದುಪಡಿಯನ್ನು, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಮತ್ತು ನಿಯಮಗಳು 1960 ರಡಿಯಲ್ಲಿ ಮಾಡಿಕೊಳ್ಳಲು ಸೂಕ್ತ ಕ್ರಮ ಕೈಗೊಳ್ಳುವುದು.

ಸಂಬಂಧಿಸಿದ ಕ್ಷೇತ್ರಾಧಿಕಾರಿಗಳು ಇನ್ನು ಮುಂದೆ ನೇಕಾರರ ಸಹಕಾರ ಸಂಘಗಳ ರಚನೆ ಸಮಯದಲ್ಲಿ ಈ ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ನೋಂದಣಿ/ತಿದ್ದುಪಡಿ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಈ ಕಛೇರಿಗೆ ಸಲ್ಲಿಸಲು ಕ್ರಮ ಕೈಗೊಳ್ಳಬೇಕೆಂದು ಆದೇಶಿಸಲಾಗಿದೆ.

05/02/2016

(ಡಾ|| ಆರ್ ರಾಜು)
ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು
ಕೈಮಗ್ಗ ಮತ್ತು ಜವಳಿ.

ಕೈಜಇ/ಜಂನಿ/37/ಕೈಮಗ್ಗ & ವಿದ್ಯುತ್ ಮಗ್ಗ/ಪ್ರತ್ಯೇಕ ಅಶಿಸ್ತು/ಸುತ್ತೋಲೆ/2015-16, ದಿ:05/02/2016

**ಪ್ರತಿಯನ್ನು ಮಾಹಿತಿಗಾಗಿ**

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ವಿಕಾಸಸೌಧ, ಬೆಂಗಳೂರು, ರವರ ಮಾಹಿತಿಗಾಗಿ.

2) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, ಸಹಕಾರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು, ರವಳ ಮಾಹಿತಿಗಾಗಿ.

3) ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-52, ರವರ ಮಾಹಿತಿಗಾಗಿ.

4) ಕೈಮಗ್ಗ ಮತ್ತು ಜವಳಿ ಇಲಾಖೆಯ, ಕೇಂದ್ರ ಕಛೇರಿಯ ಎಲ್ಲಾ ಕಾರ್ಯ ನಿರ್ವಹಣಾ ಮುಖ್ಯಸ್ಥರಿಗೆ ಆಡಳಿತಾತ್ಮಕ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

5) ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಳಗಾವಿ ಪ್ರಾಂತ, ಬೆಳಗಾವಿ, ರವರ ಆಡಳಿತಾತ್ಮಕ ಮಾಹಿತಿಗಾಗಿ ಹಾಗೂ ಕಾರ್ಯವ್ಯಾಪ್ತಿಗೊಳಪಡುವ ಎಲ್ಲಾ ಕ್ಷೇತ್ರಿಯ ಕಛೇರಿಯ ಮುಖ್ಯಸ್ಥರಿಗೆ ಅನುಪಾಲನಾ ಕ್ರಮವಹಿಸುವ ಮುಂದಿನ ಸೂಕ್ತ ಕ್ರಮಕ್ಕಾಗಿ.

6) ಸಹಕಾರ ಸಂಘಗಳ ಜಂಟಿ ನಿಬಂಧಕರು, ಗುಲ್ಬರ್ಗ ಪ್ರಾಂತ, ರಾಯಚೂರು ರವರ ಆಡಳಿತಾತ್ಮಕ ಮಾಹಿತಿಗಾಗಿ ಹಾಗೂ ಕಾರ್ಯವ್ಯಾಪ್ತಿಗೊಳಪಡುವ ಎಲ್ಲಾ ಕ್ಷೇತ್ರಿಯ ಕಛೇರಿಯ ಮುಖ್ಯಸ್ಥರಿಗೆ ಅನುಪಾಲನಾ ಕ್ರಮವಹಿಸುವ ಮುಂದಿನ ಸೂಕ್ತ ಕ್ರಮಕ್ಕಾಗಿ.

7) ಸಹಕಾರ ಸಂಘಗಳ ಜಂಟಿ ನಿಬಂಧಕರು, ಮೈಸೂರು ಪ್ರಾಂತ, ಮೈಸೂರು, ರವರ ಆಡಳಿತಾತ್ಮಕ ಮಾಹಿತಿಗಾಗಿ ಹಾಗೂ ಕಾರ್ಯವ್ಯಾಪ್ತಿಗೊಳಪಡುವ ಎಲ್ಲಾ ಕ್ಷೇತ್ರಿಯ ಕಛೇರಿಯ ಮುಖ್ಯಸ್ಥರಿಗೆ ಅನುಪಾಲನಾ ಕ್ರಮವಹಿಸುವ ಮುಂದಿನ ಸೂಕ್ತ ಕ್ರಮಕ್ಕಾಗಿ.

8) ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು, ರವರ ಆಡಳಿತಾತ್ಮಕ ಮಾಹಿತಿಗಾಗಿ ಹಾಗೂ ಕಾರ್ಯವ್ಯಾಪ್ತಿಗೊಳಪಡುವ ಎಲ್ಲಾ ಕ್ಷೇತ್ರಿಯ ಕಛೇರಿಯ ಮುಖ್ಯಸ್ಥರಿಗೆ ಅನುಪಾಲನಾ ಕ್ರಮವಹಿಸುವ ಮುಂದಿನ ಸೂಕ್ತ ಕ್ರಮಕ್ಕಾಗಿ.

9) ಜಂಟಿ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬಳ್ಳಾರಿ ಪ್ರಾಂತ/ಉತ್ತರ ವಿಭಾಗ ಬಳ್ಳಾರಿ, ಆಡಳಿತಾತ್ಮಕ ಮಾಹಿತಿಗಾಗಿ ಹಾಗೂ ಕಾರ್ಯವ್ಯಾಪ್ತಿಗೊಳಪಡುವ ಎಲ್ಲಾ ಕ್ಷೇತ್ರಿಯ ಕಛೇರಿಯ ಮುಖ್ಯಸ್ಥರಿಗೆ ಅನುಪಾಲನಾ ಕ್ರಮವಹಿಸುವ ಮುಂದಿನ ಸೂಕ್ತ ಕ್ರಮಕ್ಕಾಗಿ.

10) ಜಂಟಿ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ತುಮಕೂರು ಪ್ರಾಂತ/ಪೂರ್ವವಿಭಾಗ, ತುಮಕೂರು, ಆಡಳಿತಾತ್ಮಕ ಮಾಹಿತಿಗಾಗಿ ಹಾಗೂ ಕಾರ್ಯವ್ಯಾಪ್ತಿಗೊಳಪಡುವ ಎಲ್ಲಾ ಕ್ಷೇತ್ರಿಯ ಕಛೇರಿಯ ಮುಖ್ಯಸ್ಥರಿಗೆ ಅನುಪಾಲನಾ ಕ್ರಮವಹಿಸುವ ಮುಂದಿನ ಸೂಕ್ತ ಕ್ರಮಕ್ಕಾಗಿ.

11) ಜಂಟಿ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬೆಳಗಾವಿ ಪ್ರಾಂತ/ಪಶ್ಚಿಮ ವಿಭಾಗ, ಬೆಳಗಾವಿ, ಆಡಳಿತಾತ್ಮಕ ಮಾಹಿತಿಗಾಗಿ ಹಾಗೂ ಕಾರ್ಯವ್ಯಾಪ್ತಿಗೊಳಪಡುವ ಎಲ್ಲಾ ಕ್ಷೇತ್ರಿಯ ಕಛೇರಿಯ ಮುಖ್ಯಸ್ಥರಿಗೆ ಅನುಪಾಲನಾ ಕ್ರಮವಹಿಸುವ ಮುಂದಿನ ಸೂಕ್ತ ಕ್ರಮಕ್ಕಾಗಿ.

12) ಜಂಟಿ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬೆಂಗಳೂರು ಪ್ರಾಂತ/ದಕ್ಷಿಣ ವಿಭಾಗ, ಬೆಂಗಳೂರು, ಆಡಳಿತಾತ್ಮಕ ಮಾಹಿತಿಗಾಗಿ ಹಾಗೂ ಕಾರ್ಯವ್ಯಾಪ್ತಿಗೊಳಪಡುವ ಎಲ್ಲಾ ಕ್ಷೇತ್ರಿಯ ಕಛೇರಿಯ ಮುಖ್ಯಸ್ಥರಿಗೆ ಅನುಪಾಲನಾ ಕ್ರಮವಹಿಸುವ ಮುಂದಿನ ಸೂಕ್ತ ಕ್ರಮಕ್ಕಾಗಿ.

13) ಉಪ ನಿರ್ದೇಶಕರು (ಕೈಮಗ್ಗ), ನೋಡಲ್ ಅಧಿಕಾರಿ, ಇ-ಗವರ್ನೆನ್ಸ್, ಯೋಜನೆಗಳ ಅನುಷ್ಠಾನ, ಗಣಕೀಕರಣ, ಹಾಗೂ ಅಂತರ್ಜಾಲ ಕೆಲಸಗಳ ನಿರ್ವಹಣೆಯ ವಿಭಾಗ, ಕೈಮಗ್ಗ ಮತ್ತು ಜವಳಿ ಇಲಾಕೆ, ಕೇಂದ್ರ ಕಛೇರಿ, ಬೆಂಗಳೂರು ಇವರ ಮಾಹಿತಿಗಾಗಿ ಹಾಗೂ ಅಂತರ್ಜಾಲದಲ್ಲಿ ಸುತ್ತೋಲೆಯನ್ನು ಅಳವಡಿಸುವ ಕ್ರಮಕ್ಕಾಗಿ.

14) ಕಛೇರಿ ಪ್ರತಿ.